ಕೇಳಿದ್ದೀರಿ. ಅದಕ್ಕಿಂತ ನಮ್ಮ ಮಾನ್ಯ ಕಾಗೇರಿಯವರು ಚೆನ್ನಾಗಿಯೇ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ: ಯಾರು? ಕಾಗೇರಿಯವರು ಬುದ್ಧಿವಂತರಿದ್ದಾರೆ. ಇವರು ಬುದ್ಧಿವಂತಿಕೆಯಿಂದ ಉತ್ತರವನ್ನು ಕೊಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ನೀವು ವಿ. ಎಲ್. ಪಾಟೀಲ್‌ರು ಕೊಡುವ ಉತ್ತರವನ್ನು ಕೇಳಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮುಖ್ಯಮಂತ್ರಿಗಳಿಂದ ಕಮಿಟ್‌ಮೆಂಟ್ ಮಾಡಿಸೋಣ ಬಿಡಿ.

(ಗೊಂದಲ)

ಶ್ರೀಗೋವಿಂದ ಎಂ.ಕಾರಜೋಳ: ಇರಲಿ ಬಿಡಿ, ಕೊಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಉಪಾಧ್ಯಕ್ಷರೇ, ಈ ವಿಷಯವನ್ನು ನಾಳೆಗೆ ಹಾಕಿಕೊಳ್ಳಿ. ಆಯಿತು, ನಿಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಟಿ.ಬಿ. ಜಯಚಂದ್ರ: ಇಡೀ ರಾಜ್ಯದ ಸಮಸ್ಯೆ ಆಗಿರುವುದರಿಂದ ಅವರು ರಾಜ್ಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಕೊಡಲಿ. ಬಾಗೇಪಲ್ಲಿ ಮತ್ತು ಸಂಡೂರಿಗೆ ಸೀಮಿತವಾಗಿ ಬೇಡ. ಇಡೀ ರಾಜ್ಯದ ಬಗ್ಗೆ ಉತ್ತರವನ್ನು ಕೊಟ್ಟಾಗ ಎಲ್ಲರೂ ಮಾತನಾಡೋಣ.

(ಈ ಹಂತದಲ್ಲಿ ಧರಣಿಯಲ್ಲಿ ಇದ್ದ ಮಾನ್ಯ ಶಾಸಕರಾದ ಶ್ರೀ ಈ. ತುಕಾರಾಂ. ಎನ್.ಸಂಪಂಗಿಯವರು ಮತ್ತುಶ್ರೀ ಕೆ.ಅಭಯಚಂದ್ರ ಜೈನ್ ಅವರುಗಳು. ತಮ್ಮ ಸ್ಥಾನಗಳಿಗೆ ತೆರಳಿದರು)

ಉಪಾಧ್ಯಕ್ಷರು: ಮಾನ್ಯ ರೇವಣ್ಣನವರು, ಗಮನ ಸೆಳೆಯುವ ಸೂಚನೆ.

2.ವಿಷಯ: ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವರಾಜ್ಯ ಹೆದ್ದಾರಿ–8ರಹಿರಿಸಾವೆ–ಶ್ರವಣಬೆಳಗೊಳ–ಶನಿವಾರಸಂತೆಯರಸ್ತೆ ಕಾಮಗಾರಿಗಾಗಿ ಮಂಗಳಾಪುರ ಗ್ರಾಮದಲ್ಲಿ ಒಟ್ಟು 1ಎಕರೆ5ಗುಂಟೆ ಜಮೀನನ್ನು ಭೂ–ಸ್ವಾದೀನ ಪಡಿಸಿಕೊಳ್ಳುವ ಬಗ್ಗೆ:

ಶ್ರೀ ಹೆಚ್. ಡಿ ರೇವಣ್ಣ: ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ–8ರ ಹಿರಿಸಾವೆ–ಶ್ರವಣಬೆಳಗೊಳ–

ಶನಿವಾರಸಂತೆಯ ರಸ್ತೆ ಕಾಮಗಾರಿಗಾಗಿ ಮಂಗಳಾಪುರ ಗ್ರಾಮದಲ್ಲಿ ಒಟ್ಟು 1 ಎಕರೆ 5 ಗುಂಟೆ ಜಮೀನನ್ನು ಭೂ–ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು): ಮಾನ್ಯ ಉಪಾಧ್ಯಕ್ಷರೆ,.

ಹಾಸನ ಜಿಲ್ಲೆಯಲ್ಲಿ ಬರುವ, ಹಿರಿಸಾವೆ– ಶ್ರವಣಬೆಳಗೊಳ–ಚನ್ನರಾಯಪಟ್ಟಣ–ಹೊಳೆನರಸೀಪುರ–ಶನಿವಾರಸಂತೆ ರಾಜ್ಯ ಹೆದ್ದಾರಿ–8ರ ಸರಪಳಿ 28.20 ಕಿಮೀ ಯಿಂದ 72.00 ಕಿಮೀರವರಿಗಿನ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು 2007–08ನೇ ಸಾಲಿನಲ್ಲಿ ಕೈಗೊಂಡಿದ್ದು, ಈ ರಸ್ತೆಯಲ್ಲಿ ಕಿಮೀ 39.400 ರಿಂದ 40.050 ಕಿಮೀ ರವರೆಗೆ (ಸಿಂಗಾಪುರ ಹತ್ತಿರ), ಕಿಮೀ 45. 060ರಿಂದ 45.57 ಕಿಮೀ ರವರೆಗೆ (ತಟ್ಟೀಕೆರೆ ಹತ್ತಿರ), ಕಿಮೀ 46.945 ರಿಂದ ಕಿಮೀ 47.715 ರವರೆಗೆ (ಮಂಗಳಾಪುರ ಹತ್ತಿರ) ಹಾಗೂ ಕಿಮೀ 47.715 ರಿಂದ 49.575 ರವರೆಗೆ (ಸೂರನಹಳ್ಳಿ ಹತ್ತಿರ), ಬರುವ ರಸ್ತೆ ತಿರುವುಗಳ ಜಾಮಿತಿ ಅಭಿವೃದ್ಧಿ ಕಾಮಗಾರಿಗಳನ್ನು ಕೆಆರ್‌ಡಿಸಿಎಲ್ ಅನುದಾನದಲ್ಲಿ ರಾಷ್ಟ್ರೀಯ ಹೆದ್ದಾರಿ ವಿಶೇಷ ವಿಭಾಗ, ಚನ್ನರಾಯಪಟ್ಟಣ ಇವರು ನಿರ್ವಹಿಸಲು ವಹಿಸಲಾಗಿತ್ತು ಇದರಲ್ಲಿ, ಕಿಮೀ 47.715 ರಿಂದ 49.575 ರವರೆಗೆ (ಸೂರನಹಳ್ಳಿ ಹತ್ತಿರ), ಬರುವ ರಸ್ತೆ ತಿರುವುಗಳ ಜಾಮಿತಿ ಅಭಿವೃದ್ಧಿ ಕಾಮಗಾರಿಯನ್ನು ಹೊರತು ಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ

ಸೂರನಹಳ್ಳಿ ಹತ್ತಿರ ಬರುವ ರಸ್ತೆ ಸರಪಳಿ ಕಿಮೀ 47.715 ರಿಂದ 49.575 ರವರಿಗಿನ ಕಾಮಗಾರಿಯು ತಿರವುಗಳನ್ನು ನೇರಗೊಳಿಸುವ ಅಂಶಗಳನ್ನು ಒಳಗೊಂಡಿದ್ದು, ಸದರಿ ರಸ್ತೆಯ ಭಾಗವು ಹೊಳೆನರಸೀಪುರ ಪಟ್ಟಣಕ್ಕೆ ಹೊಂದಿಕೊಂಡಂತೆ ಇರುವುದರಿಂದ, ಮುಂದೆ ಆಗಲಿರುವ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಮುಂದೆ ಭೂಸ್ವಾಧೀನ ಮತ್ತು ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಕ ಬೆಲೆ ತೆರಬೇಕಾದ ಸಂಭವವನ್ನು ತಡೆಯುವ ದೃಷ್ಟಿಯಿಂದ, ಆ ಭಾಗದ ರಸ್ತೆಯನ್ನು 4 ಪಥಗಳನ್ನಾಗಿ ನಿರ್ಮಿಸಲು ರಾಷ್ಟ್ರೀಯ ಹೆದ್ದಾರಿ ಇಲಾಖೆಯು ಕ್ರಮ ಕೈಗೊಂಡು, ಈ ಸಂಬಂಧ 904.50 ಲಕ್ಷಗಳ ಅಂದಾಜು ಪಟ್ಟಿ ತಯಾರಿಸಿ ಅದಕ್ಕೆ ಕೆಆರ್‌ಡಿಸಿಎಲ್‌ನ ತಾಂತ್ರಿಕ ಸಮಿತಿ ಮಂಡಳಿಯ ಅನುಮೋದನೆ ಸಹ ಪಡೆದುಕೊಳ್ಳಲಾಗಿತ್ತು.

ಈ ರಸ್ತೆಯ ಭಾಗವನ್ನು 4 ಪಥದ ರಸ್ತೆಯಾಗಿ ಅಭಿವೃದ್ಧಿ ಪಡಿಸಲು ಅಗತ್ಯವಾಗಿ ಬೇಕಾದ ಮಂಗಳಾಪುರ ಗ್ರಾಮದ ಸರ್ವೆ ಸಂ.24,66,25/2,18/1

ಮತ್ತು 18/3 ರಲ್ಲಿ ಒಟ್ಟು 1ಎಕರೆ 5ಗುಂಟೆ ಜಮೀನನ್ನು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ 1–10–2010 ರಂದು ಭೂಸ್ವಾಧೀನ ಕಲಂ 4(1) ರಡಿ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ ಜಮೀನಿನ ಮಾಲೀಕರು ದಿನಾಂಕ 2–12–2010 ರಂದು ಮನವಿ ಸಲ್ಲಿಸಿ ಕಲಂ 6(1) ಅಧಿಸೂಚನೆ ಹೊರಡಿಸಬಾರದೆಂದು ಮನವಿ ಮಾಡಿ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಲು ಕೋರಿದ್ದರು.

ಈ ಮಧ್ಯೆ,ಭೂಮಾಲೀಕರಲ್ಲಿ ಒಬ್ಬರಾದ ಶ್ರೀ ಎಸ್. ಹೆಚ್. ಮೋಹನ್‌ಕುಮಾರ್, ವಕೀಲರು, ರವರು ರಸ್ತೆ ನಿರ್ಮಾಣಕ್ಕೆ ತಡಯೊಡ್ಡಲು ಕರ್ನಾಟಕ ಲೋಕಾಯುಕ್ತಕ್ಕೆ ಆಪಾದನೆ ಅರ್ಜಿ ಸಲ್ಲಿಸಿದ್ದು, ಪ್ರಕರಣವು ಲೋಕಾಯುಕ್ತದಲ್ಲಿ ಬಾಕಿ ಇದ್ದುದರಿಂದ ಅರ್ಜಿದಾರರ ಕೋರಿಕೆಯನ್ನು ಪರಿಗಣಿಸಿ ತಾತ್ಕಾಲಿಕವಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವಂತೆ ಜಿಲ್ಲಾಧಿಕಾರಿಯವರನ್ನು ಕೋರಲಾಗಿತ್ತು.

ಈ ಮಧ್ಯೆ, ಕರ್ನಾಟಕ ಲೋಕಾಯುಕ್ತವು, ಶ್ರೀ ಎಸ್. ಹೆಚ್.ಮೋಹನ್‌ಕುಮಾರ್, ವಕೀಲರು, ನೀಡಿದ ಅರ್ಜಿಯನ್ನು ಲೋಕಾಯುಕ್ತ 9 ರಡಿ ಪರಿಗಣಿಸಿ, ನಿಯಮ 12(1) ರಡಿಯಲ್ಲಿನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ:

"the Competent Authority to reconsider the proposal of construction of four way road from Chainage from Km 47.715 to Km49.575 that of two line road in the said area , unlike the construction of two way road on both ends from kms 28.20 to km 47.715 and km 49.575 to km 60.000".

ಮಾನ್ಯ ಕರ್ನಾಟಕ ಲೋಕಾಯುಕ್ತವು ನಿಯಮ 12(1) ರಡಿ ನೀಡಿದ ವರದಿಯ ಅನುಸಾರ ಪ್ರಕರಣವನ್ನು ಮರುಪರಿಶೀಲಿಸಿ, ಮುಖ್ಯ ಇಂಜಿನಿಯರ್ (ದ), ಬೆಂಗಳೂರು ರವರು, ಈ ಕೆಳಕಂಡ ಕಾರಣಗಳಿಂದ ನಾಲ್ಕು ಪಥದ ರಸ್ತೆಯನ್ನೇ ನಿರ್ಮಾಣ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

- ಪ್ರಸ್ತಾವಿತ ರಸ್ತೆಯ ಸರಪಳಿ 47.715.ಕಿಮೀ ಇಂದ 49,575 ಕಿಮೀ ವರೆಗಿನ ಒಟ್ಟು 1.86 ಕಿಮೀ ಉದ್ದದ ರಸ್ತೆಯನ್ನು ಜಾಮಿತಿ ಅಭಿವೃದ್ಧಿಗಾಗಿ 4 ಪಥದ ರಸ್ತೆಯನ್ನಾಗಿ ನಿರ್ಮಾಣ ಮಾಡಲು ಮೂರು ಅಂದಾಜುಗಳನ್ನು ಒಟ್ಟಾರೆ ರೂ. 904 ಲಕ್ಷಗಳಿಗೆ 2007–2008ನೇ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿ ವಲಯದ ವತಿಯಿಂದ

ಮಂಜೂರಾತಿ ನೀಡಲಾಗಿದೆ. 2007ರ ವರ್ಷದಲ್ಲಿ ರಸ್ತೆಯಲ್ಲಿನವಾಹನ ಸಾಂದ್ರತೆಯು 16660 ಪಿಸಿಯು ಗಳಷ್ಟು ಇರುತ್ತದೆಂದು ವರದಿಸಲಾಗಿದೆ. ಪ್ರಸ್ತುತ 2011ನೇ ವರ್ಷದ ಫೆಬ್ರವರಿ ತಿಂಗಳಲ್ಲಿ ಕೈಗೊಂಡ ವಾಹನ ಸಂಚಾರ ಸಮೀಕ್ಷೆಯನುಸಾರ ರಸ್ತೆಯಲ್ಲಿನ ವಾಹನ ಸಾಂದ್ರತೆ 12605 ಪಿಸಿಯುಗಳಷ್ಟಿರುತ್ತದೆ. ಮುಂದಿನ ದಿನಗಳಲ್ಲಿ ಸರ್ಕಾರಿ ಜೂನಿಯರ್ ಕಾಲೇಜು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಿಪ್ಲೋಮಾ ಕಾಲೇಜ್ ಮತ್ತಿತರ ಪ್ರೌಢಶಾಲೆಗಳಾಗುತ್ತಿದ್ದು ,ವಾಹನ ಸಂಚಾರವು ಅಧಿಕವಾಗಬಹುದು.

- ಪ್ರಸ್ತಾವಿತ ಕಾಮಗಾರಿಯಲ್ಲಿನ ಭೂಸ್ವಾಧೀನಕ್ಕಾಗಿ ರೂ.35.04 ಲಕ್ಷಗಳನ್ನು ಉಪವಿಭಾಗಾಧಿಕಾರಿಗಳಿಗೆ ಇಲಾಖೆಯಿಂದ ಪಾವತಿಸಲಾಗಿದೆ. ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಬಹುಪಾಲು ಪರಿಹಾರವನ್ನು ಉಪ ವಿಭಾಗಾಧಿಕಾರಿಯವರಿಂದ ವಿತರಿಸಲಾಗಿದೆ.
- ಈ ಸರಪಳಿಯಲ್ಲಿ ಬರುವ 3 ಕಾಮಗಾರಿಗಳ ಪೈಕಿ 2 ಕಾಮಗಾರಿಗಳಿಗೆ (ಸೇತುವೆ ನರ್ಮಾಣ ಹೊರತುಪಡಿಸಿ) ಒಟ್ಟಾರೆ ರೂ. 219.53 ಲಕ್ಷಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದೆ.
- ಸದರಿ ಜಾಮಿತಿ ಅಭಿವೃದ್ದಿಗಾಗಿ ರಸ್ತೆಯ ಫಾರ್ಮೇಷನ್ ಅನ್ನು ನಾಲ್ಕು ಪಥದ ಅಭಿವೃದ್ದಿಗಾಗಿ ಕೆಳಮಟ್ಟದ ಅಗಲವನ್ನು 40 ಮೀಟರ್‌ನಷ್ಟು ಮತ್ತು ಮೇಲ್ಮಟ್ಟದ ರಸ್ತೆ ಅಗಲವನ್ನು 24.0 ಮೀ ನಂತೆ ನಿರ್ಮಾಣ ಮಾಡಲಾಗಿದೆ. ಸದರಿ ಸರಪಳಿಯಲ್ಲಿ ಭೂಸ್ವಾಧೀನಕ್ಕೆ ಅನುಸಾರವಾಗಿ ಮಣ್ಣಿನ ಏರಿ ಹಾಗೂ ಅಡ್ಡ ಮೋರಿಗಳನ್ನು ಸಹ ನಿರ್ಮಾಣ ಮಾಡಲಾಗಿದೆ. ಹೀಗಾಗಿ,ಎರಡು ಪಥದ ರಸ್ತೆನಿರ್ಮಿಸಿದರೂ, ಮಣ್ಣಿನ ಏರಿ ಹಾಗೂ ಅಡ್ಡ ಮೋರಿಗಳನ್ನು ನಿರ್ಮಿಸಲಾಗಿರುವುದರಿಂದ, ಸಾಧೀನಪಡಿಸಿಕೊಳ್ಳಲಾದ ಜಮೀನುಗಳಲ್ಲಿ ವ್ಯವಸಾಯ ಮಾಡಲು ಕಷ್ಟಸಾಧ್ಯವಾಗಿರುತ್ತದೆ.

ಅದರಂತೆ, ಮೇಲೆ ತಿಳಿಸಿದ ಜಮೀನುಗಳನ್ನು ಸ್ವಾಧೀನಪಡಿಸಿಕ್ಕೊಳ್ಳಲು ಕಲಂ 4(1) ರಡಿ ಪುನ: ಅಧಿಸೂಚನೆ ಹೊರಡಿಸಲು ಜಿಲ್ಲಾಧಿಕಾರಿಯವರನ್ನು ದಿನಾಂಕ 20–4–2012 ರಂದು ಕೋರಲಾಗಿದೆ. ಜಿಲ್ಲಾಧಿಕಾರಿ, ಹಾಸನ, ರವರು ಈ ಸಂಬಂಧ ಸರ್ಕಾರದ ಅನುಮತಿ ಕೋರಿರುತ್ತಾರೆ.

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ),ಬೆಂಗಳೂರು, ರವರ ವರದಿ ಸರ್ಕಾರದ ಪರಿಶೀಲನೆಯಲ್ಲಿದ್ದು, ಈ ಸಂಬಂಧ ಸೂಕ್ತ ನಿರ್ಧರ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಏನಾಗಿದೆ ಎನ್ನುವ ಮಾಹಿತಿಯನ್ನು ತಮಗೆ ಹೇಳಿ ಬಿಡುತ್ತೇನೆ. ದಿನಾಂಕ: 14-03-2007ರಲ್ಲಿ ಹೊಳೆನರಸೀಪುರ ಟೌನ್ ವಾರ್ಡ್ ನಂ:1 ರಲ್ಲಿ ರಸ್ತೆ ಹೋಗುತ್ತದೆ. ಅಲ್ಲಿ ಸಿಮಾರು 2000 ನಿವೇಶನವಿದೆ. ಈಗಾಗಲೇ 7.23 ಎಕರೆ ಜಮೀನು acquireಮಾಡಿ ಈ ಜಮೀನುದಾರರಿಗೆ ಪರಿಹಾರವನ್ನು ಕೊಟ್ಟು, ಈ ಮೋಹನ್ ಕುಮಾರ್ ಎನ್ನುವವರು ಕೂಡ ಪರಿಹಾರವನ್ನು ತೆಗೆದುಕೊಂಡಿದ್ದಾರೆ. ಪರಿಹಾರವನ್ನು ತೆಗೆದುಕೊಂಡು ಏನು ಮಾಡಿದ್ದಾರೆಂದರೆ, ಹೆಚ್ಚಿಗೆ ಪರಿಹಾರ ಬೇಕು ಎಂದು ಹೈಕೋರ್ಟಿಗೆ ಹೋದರು. ತಮಗೆ ಹೈಕೋರ್ಟಿನ ರಿಟ್ ಪೆಟಿಷನ್ ಕಾಪಿ ಬೇಕಾದರೆ ಕೊಡುತ್ತೇನೆ, ಓದಿ ಎಂದರೆ ಓದುತ್ತೇನೆ. ಸಿಂಗಲ್ ಬೆಂಚಿಗೆ ಹೋದಾಗ ಅಲ್ಲಿ ಡಿಸ್‌ಮಿಸ್ ಮಾಡಿದರು ಅದಾದ ಮೇಲೆ ವಿಭಾಗೀಯ ಪೀಠಕ್ಕೆ ಹೋದರು ಅಪೀಲ್ ನಂ:640/2007 ಅದರಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದ ರಿಟ್ ಪೆಟಿಷನ್ ll (223/2006ರಿಟ್ ಅಪೀಲ್ 640/07ರ ಆದೇಶ ಏನು ಎರಡನ್ನು ಕಳುಹಿಸಿದರು ಅದನ್ನು ವಜಾ ಮಾಡಿ ರಸ್ತೆಯನ್ನು ಮಾಡಬೇಕೆಂದು ಹೈಕೋರ್ಟಿನ ಸಿಂಗಲ್ ಡಬಲ್ ಬೆಂಚಿನ ಎರಡರಲ್ಲಿಯೂ ಆಗಿದೆ. ನೀವು ಕಾಪಿ ತೆಗೆಸಿ ನೋಡಿ. ಹೈಕೋರ್ಟಿನ ಆರ್ಡರ್ ಮೇಲೆ ಮತ್ತೊಮ್ಮೆ ಹೈಕೋರ್ಟಿನ ಮೇಲೆ ಅಪೀಲ್ ಹೋಗುವುದಕ್ಕೆ ಅವರಿಗೆ ಅವಕಾಶ ಸಿಗಲಿಲ್ಲ. ಇವರದು ಎಲ್ಲಾಪಾಯಿಂಟ್ ಆಗಿದ್ದು ಮಧ್ಯದಲ್ಲಿ 1.05 ಎಕರೆ ಬ್ರಿಟ್ಜ್ ಮಾತ್ರ ಆಗಬೇಕಾಗಿದೆ. ಜಲ್ಲಿ ಹಾಕಿ ಮೋರಿ ಒಂದು ಮಾಡುವುದು ಅಷ್ಟು ಉಳಿದಿದೆ, ಆಗ ನಮ್ಮ ಸರ್ಕಾರ ಇತ್ತು. ಆಗ ಏನು ಮಾಡಿದರು ಎಂದರೆ, ಲೋಕಾಯುಕ್ತಕ್ಕೆ ಒಂದು ಅರ್ಜಿಯನ್ನು ದಿನಾಂಕ: 18.12.2007ರಲ್ಲಿ 12(1)ರಡಿ ಕೊಟ್ಟರು. ಅರ್ಜಿಯಲ್ಲಿ excess measurement ಎಂದು ಅರ್ಜಿಯನ್ನು ಕೊಟ್ಟಿರುತ್ತಾರೆ. ಅಂದಾಜು ಸರಿಯಾಗಿ ಮಾಡಿಲ್ಲ ಎಂದು ಒಂದೆರಡು ಪಾಯಿಂಟ್‌ಗಳನ್ನು ಸೇರಿಸಿಕೊಂಡು 4laneಮಾಡಬೇಡಿ, 2laneಮಾಡಿ ಎಂದು complaint ಇದೆ,ದಯಮಾಡಿ ಅದರ ಕಾಪಿ ತೆಗೆದು ನೋಡಿ. ನಿಮ್ಮ ಇಲಾಖೆಯವರು ತಮಗೆ ಸರಿಯಾಗಿ ಮಾಹಿತಿ ಕೊಟ್ಟಿಲ್ಲ. ಹೈಕೋರ್ಟ್ reject ಮಾಡಿದ ಮೇಲೆ ಲೋಕಾಯುಕ್ತದವರು 2laneಮಾಡಬೇಡಿ, 4

laneಮಾಡು ಎಂದು ಹೇಳುವುದಕ್ಕೆ ಅಧಿಕಾರ ಇದೆಯೇ? ಹೈಕೋರ್ಟ್ ದೊಡ್ಡದೋ? ಲೋಕಾಯುಕ್ತ ದೊಡ್ಡದೋ? ಮಾನ್ಯ ಮಂಜುರವರು ಇಲ್ಲಿಯೇ ಕುಳಿತಿದ್ದಾರೆ. ಇದು ಒಂದೇ ಕಡೆಅಲ್ಲ, ಚನ್ನರಾಯ ಪಟ್ಟಣದಿಂದ ಅರಕಲಗೂಡಿನವರೆಗೂ ಏಳು curveಗಳಿವೆ. ಆ ಏಳು curveಗಳನ್ನು ಎಲ್ಲಾ ಕಡೆ straightಮಾಡಿದ್ದಾರೆ.ಅದು ಶನಿವಾರ ಸಂತೆ ಮತ್ತು ಸೋಮವಾರ ಪೇಟೆಗೆ ಹೋಗುವಂತಹ ರಸ್ತೆ. ಆ ಏಳು curveಗಳಲ್ಲಿ ಎಷ್ಟು accidentಆಗುತ್ತಿತ್ತು ಎನ್ನುವುದರ ಬಗ್ಗೆ Police Departmentನಿಂದ ವರದಿಯನ್ನು ತರಿಸಿದ್ದಾರೆ. ಹೈಕೋರ್ಟ್‌ನಲ್ಲಿ Single Bench-Double Bench ಎರಡೂ ಕಡೆಯಲ್ಲಿ ತೀರ್ಮಾನವಾಗಿದೆ. ಇದನ್ನು ಲೋಕಾಯುಕ್ತದವರು 3–4 ವರ್ಷ ಇಟ್ಟುಕೊಂಡು ಲೋಕಾಯುಕ್ತದ ಇಂಜಿನಿಯರುಗಳು ಅಧಿಕಾರದಿಂದ ಇಳಿದ ಮೇಲೆ 5–10 ಲಕ್ಷದುದ್ದು ತೆಗೆದುಕೊಂಡಿರುವುದು ಮತ್ತು ಅವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿದೆ. ಲೋಕಾಯುಕ್ತಕ್ಕೆ ಏನು complaintಕೊಟ್ಟಿದ್ದಾರೆ,ಲೋಕಾಯುಕ್ತದjudgmentಏನಿದೆ.,

ಹೈಕೋರ್ಟ್‌judgment ಏನಿದೆ ಎನ್ನುವುದನ್ನು ದಯಮಾಡಿ ಎಲ್ಲಾ ತೆಗೆದು ನೋಡಿ. ಲೋಕಾಯುಕ್ತದವರು ಏನು ಹೇಳಿದ್ದಾರೆ? 4 laneಮಾಡಬೇಡಿ ಎಂದು ನಿಮಗೆ ಅವರೇನಾದರೂ ಹೇಳಿದ್ದಾರಾ? ಹೈಕೋರ್ಟ್ ದೊಡ್ಡದಾ ? ಲೋಕಾಯುಕ್ತದೊಡ್ಡದಾ? ನಾಳೆ ಬೆಳಿಗ್ಗೆ ನೀವು ಒಂದು ಕೆಲಸ ಮಾಡಿ. ಲೋಕಾಯುಕ್ತ ತೀರ್ಮಾನ ಕೊಟ್ಟಿದೆ, ಹೈಕೋರ್ಟ್‌ಗೆ ಹೋಗುವುದೇ ಬೇಡ ಎಂದು ಹೇಳಬೇಕಾಗುತ್ತದೆ. ಹೈಕೋರ್ಟ್ ತೀರ್ಮಾನ ಕೊಟ್ಟ ಮೇಲೂ ಕೂಡ ಮೋಹನ್ ಕುಮಾರ್ ಎನ್ನುವವರು ಹೋಗಿರುವುದು,. ಮೋಹನ್ ಕುಮಾರ್ ದುದ್ದು ತೆಗೆದುಕೊಂಡಿರುವುದು ಇದೆ. 7ಎಕರೆ23 ಗುಂಟೆಯಲ್ಲಿ ಜಮೀನು ಅವರದೂ ಹೋಗಿಲ್ಲವೇ? ಇವರ ತಂದೆ ಹೆಸರಿನಲ್ಲಿ ಜಮೀನು ಇರುವುದು. ಇವನಿಗೆ ದಿನಾ ಅರ್ಜಿ ಬರೆಯುವುದೇ ಕೆಲಸ, ಬೇರೆ ಏನೂ ಕೆಲಸ ಇಲ್ಲ. ಇವತ್ತು ಎಷ್ಟು ಎಸ್ಟಿಮೇಟ್ ಕಾಸ್ಟ್ ಆಗುತ್ತದೆ? ಇದನ್ನು ಲೋಕಾಯುಕ್ತದಲ್ಲಿ ಇಟ್ಟುಕೊಂಡಿದ್ದು, ಅವರಿಗೆ 4 ವರ್ಷಗಳು ಬೇಕೇ? ಈ ರಾಜ್ಯದಲ್ಲಿ ಲೋಕಾಯುಕ್ತ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದನ್ನು ನೀವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. Complaintಕೊಟ್ಟು 4 ವರ್ಷವಾದ ಮೇಲೆ, ಲೋಕಾಯುಕ್ತದಲ್ಲಿ ಯಾರು ಏನು ಮಾಡಿದರು ಎಂದು ನಿಮಗೆ ಕಾಪಿ ಕಳುಹಿಸಿಕೊಡುತ್ತೇನೆ. ಹೈಕೋರ್ಟ್ ರಿಟ್ ಪೆಟಿಷನ್ ಇದೆ, ಸಿಂಗಲ್ ಬೆಂಚ್‌ನಲ್ಲಿ ಏನು ಆರ್ಡರ್ ಆಗಿದೆ, ಡಬಲ್ ಬೆಂಚ್‌ನಲ್ಲಿ ಏನು ಆರ್ಡರ್ ಆಗಿದೆ, ಅದಾದ

ಮೇಲೆ ಲೋಕಾಯುಕ್ತಕ್ಕೆ ಹೋಗಿದ್ದಾರೆ. ಹೈಕೋರ್ಟ್‌ನವರೂ ವಜಾ ಮಾಡಿದ್ದರೆ. ಅವರು ಏನು complaintಕೊಟ್ಟಿದ್ದಾರೆ? 4Laneಬೇಡವೆಂದು ಏನಾದರೂ complaintಕೊಟ್ಟಿದ್ದಾರಾ? ನಾನು ಹೇಳುವುದೇನೆಂದರೆ ಎಲ್ಲಾ reach ಆಗಿದೆ. ಕೇವಲ 50 ಅಡಿ ಇದೆ.ಅವರ ಅಣ್ಣ Executive Engineer.ಇದು ಮಂಗಳಾಪುರದಲ್ಲಿ 4(1) ಆಗಿರುವುದು.ಇದನ್ನುಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಕೊಟ್ಟಿದ್ದು, ಇದನ್ನು ಜಿಲ್ಲಾಧಿಕಾರಿಗಳು ಮತ್ತೆ ನೋಡಿದ್ದಾರೆ. ಜಿಲ್ಲಾಧಿಕಾರಿಗಳು ಹೋಗಿ ಸ್ಥಳ ತನಿಖೆ ಮಾಡಿ 4 laneಮಾಡಿಕೊಡಬೇಕು, permissionಕೊಡಿ ಎಂದು ನಿಮ್ಮ ಹತ್ತಿರ ಕೇಳಿದ್ದಾರೆ. ಆದರೆ ಲೋಕಾಯುಕ್ತದವರುdecisionತೆಗೆದುಕೊಳ್ಳುವ ನಿರ್ಧಾರವನ್ನು ನಿಮಗೆ ಬಿಟ್ಟಿದ್ದಾರೆ ಹೊರತು ,ಮಾಡಬೇಡಿ ಎಂದು ಏನಾದರೂ ಹೇಳಿದ್ದಾರಾ? ಆ ಕಡೆ 200 ಮೀಟರ್ ಬಿಟ್ಟಿದ್ದಾರೆ. ಇಲ್ಲಿ 4laneಏಕೆ ಮಾಡಿದಿರಿ? Starting reach ಹೊಳೆನರಸೀಪುರ ಟೌನ್‌ನಲ್ಲಿ railway lineಬರುತ್ತದೆ. ಅಲ್ಲಿ ROB underpass ಬರುತ್ತಿದೆ. ಅದು ಇಲ್ಲಿಗೆ ಬಂದು ನಿಲ್ಲುತ್ತದೆ ಎಂದು 200ಮೀಟರ್ ಬಿಟ್ಟು 4laneಮಾಡಿರುವುದು. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಬೇಕಾದರೆ ಅಲ್ಲಿ ಸ್ಥಳ ತನಿಖೆ ಮಾಡಿ.ಇದು ಮಾಡಿರುವುದು ಸರಿ ಇದೆಯೇ ಎಂದು ಮಾಡಿ ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಲೋಕಾಯುಕ್ತಕ್ಕೆ ನಾಲ್ಕು ವರ್ಷ ಬೇಕಾ? ನೀವು ಹಾಕಿದರೆ ಸ್ಥಳ ತನಿಖೆ ಮಾಡಿ. ನಿಮಗೆ ಇಲ್ಲಿ ತಪ್ಪು ಮಾಹಿತಿ ಕೊಟ್ಟಿದ್ದಾರೆ ಹೈಕೋರ್ಟ್‌ನ ರಿಟ್ ಪೆಟಿಷನ್ ಬಗ್ಗೆ ಹೇಳಿದ್ದೇನಲ್ಲ, ಹೈಕೊರ್ಟ್‌ನಲ್ಲಿ disputesಅಗಿಲ್ಲವೆಂದರೆ ನೀವು ಹೇಳುವ ವಿಷಯಕ್ಕೆ ನಾನು ತಲೆ ಬಾಗುತ್ತೇನೆ ಇದು ಒಂದೇ ಕಡೆ ಅಲ್ಲ, ಏಳುಎಕರೆ Possessionತೆಗೆದುಕೊಂಡಾಗಿದೆ.

ಶ್ರೀ ಸಿ.ಎಂ. ಉದಾಸಿ: ಹೈಕೋರ್ಟ್‌ನಲ್ಲಿ ಅವರಿಗೆ ಏನೂ ಪರಿಹಾರ ದೊರೆತಿಲ್ಲ, ಅದರ ಬಗ್ಗೆ ಎರಡು ಮಾತಿಲ್ಲ. ಅವರ ರಿಟ್ ಪೆಟಿಷನ್ ವಜಾ ಆಗಿದೆ ಅದರ– ಬಗ್ಗೆ ಕೂಡ ಎರಡು ಮಾತಿಲ್ಲ. ಅದಾದ ಮೇಲೆ 12(1) ರಲ್ಲಿ ಲೋಕಾಯುಕ್ತಕ್ಕೆ ಅರ್ಜಿಯನ್ನು ಕೊಟ್ಟಿದ್ದಾರೆ. ಲೋಕಾಯುಕ್ತಕ್ಕೆ ಅವರು ಕೊಟ್ಟಿರುವ ಬೇಡಿಕೆ ಬೇರೆ ಇರಬೇಕು ಮತ್ತು ಅದಕ್ಕೆ ಉತ್ತರ ಬರೆದಿರುವುದು ಬೇರೆ ಇದೆ ಎನ್ನುವ ಮಾತನ್ನು ತಾವು ಹೇಳುತ್ತಿದ್ದೀರಿ .ಆದರೆ ಇಲ್ಲಿ ಬಂದಿರುವಂತಹ observationಏನಿದೆ ಎಂದರೆ ಎಲ್ಲಾ ಕಡೆ 2lane ಇರುವಾಗ ಇಲ್ಲಿ ಏಕೆ 4 laneಮಾಡಬೇಕೆನ್ನುವ ಅರ್ಥದಲ್ಲಿ ಬರೆದಿದ್ದಾರೆ.ಆದರೆ ಅವರು

ಬರೆದಾಕ್ಷಣ ನಾವು ಈ ತೀರ್ಮಾನಕ್ಕೆ ಬಂದಿಲ್ಲ. ಇಲ್ಲಿ ಏಕೆ 4laneಬೇಕು ಎನ್ನುವ ತೀರ್ಮಾನಕ್ಕೆ ನಾವು ಬಂದಿದ್ದೇವೆ.ಇಲ್ಲಿ 4laneಆಶಲೇ ಬೇಕು ಎನ್ನುವ ಬಗ್ಗೆ ನೀವು ಹೇಳಿದ ಹಾಗೆ ROBಮಾಡಲಿ, underpassಆಗಲಿ ಮಾಡಿದರೂ ಸಹ ನಗರಕ್ಕೆ ಬಂದಿರುವಂತಹ ಪ್ರದೇಶವಿರುವುದರಿಂದ, ಇನ್ನು ಮುಂಬರುವ ದಿವಸಗಳಲ್ಲಿ ಜನ, ವಾಹನ ಸಾಂದ್ರತೆ ಜಾಸ್ತಿಯಾಗುತ್ತದೆ, ಆ ಕಾರಣಕ್ಕಾಗಿ ಮಾಡಬೇಕೆಂದು ನಾವು ಇದ್ದೇವೆ. ಅದಕ್ಕೆ ಕಾನೂನು ಸಲಹೆ ಪಡೆದು ಮಾಡುತ್ತೇವೆ. ಈ ವಿಚಾರದಲ್ಲಿ ಹೇಳುವುದಾದರೆ 4(1) ಮಾಡಿ ಒಂದು ವರ್ಷದಲ್ಲಿ final proceedingsಆಗಬೇಕಾಗಿತ್ತು ಎನ್ನುವ ಒಂದು ಅನುಮಾನ ನನ್ನನ್ನು ಕಾಡುತ್ತಿದೆ. ಇದರ ಬಗ್ಗೆ ಕಾನೂನು ಸಲಹೆ ಪಡೆಯಬೇಕಾಗಿದ್ದು, Advocate General ಅವರ ಜೊತೆ ಚರ್ಚೆ ಮಾಡಿ, ಇದಕ್ಕೆ ಪರಿಹಾರ ಕಂಡುಹಿಡಿದು, ನೀವು ಹೇಳಿದಂತೆ 4lane ಮಾಡುವಂತಹ ವಿಚಾರದಲ್ಲಿ ಸರ್ಕಾರದ ಒಪ್ಪಿಗೆ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಮಂತ್ರಿಗಳಿಗೆ ಅಧಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ತಮಗೆ ಇನ್ನೊಂದು ವಿಚಾರ ಹೇಳುವುದೇನೆಂದರೆ, ತಾವು ಹೇಳುವುದು ನಿಜ. 4(1) ಮಾಡಿ ಒಂದು ವರ್ಷದಲ್ಲಿ ಆಗಬೇಕೆಂದು ಹೇಳಿದಿರಿ. ಆದರೆ ನಂಜುಂಡೇಗೌಡ ಎನ್ನುವ ಹುಣಸೂರು ಡಿವಿಜನ್ Executive Engineer ಏನು ಮಾಡಿದರು ಗೊತ್ತೆ?ಅವರು ಒಂದು ಪ್ರೆಜರ್ ಮಾಡಿ ವಾಪ್ಪಸ್ಸು ತೆಗೆಸಿದ್ದಾನೆ. ನಿಮ್ಮExecutiveEngineer Writingನಲ್ಲಿ,ಇದನ್ನು ಆಮೇಲೆ ಮಾಡುತ್ತೇವೆ, ಸ್ವಲ್ಪ ದಿವಸ 4(1) ವಾಪಸ್ಸು ತೆಗೆದುಕೊಳ್ಳಿ ಎಂದು ಬರೆದಿದ್ದಾರೋ ಇಲ್ಲವೋ ಎಂದು ನೀವು ದಯಮಾಡಿ ನೋಡಿ. ಅದು ಯಾವ ಉದ್ದೇಶಕ್ಕೆ ಬರೆದ ಪತ್ರ? ನಾನು ಹೇಳುವುದು 4(1) ಮಾಡಿದಿರಿ, 6(1) ಮಾಡಿದಿರಿ, ಪೊಸೆಷನ್ ತೆಗೆದುಕೊಂಡಿದ್ದೀರಿ. ಕೇವಲ 50 ಅಡಿ ಜಾಗ 1ಎಕರೆ 05 ಗುಂಟೆಗೆ ಆತ ಜಮೀನು excessಹೋಗಿದೆ, ಅದಕ್ಕೆ ನನಗೆ ದುಡ್ಡು ಕೊಡಿ ಎಂದು ಅರ್ಜಿ ಕೊಟ್ಟಿದ್ದಾನೆ. ಅವನು ಹೈಕೋರ್ಟಿಗೆ ಹೋಗಿದ್ದಾನೆ. ಆಕಡೆ ಟೌನ್ ಮತ್ತು ವಾರ್ಡ್ ನಂಬರ್ ಒಂದರಲ್ಲಿ ಟೌನ್ ಒಳಗಡೆ ಬರುತ್ತಿರುವ ರಸ್ತೆ. ಅದರ ವಿಚಾರದಲ್ಲಿ ತಾವು ಒಪ್ಪಿಕೊಂಡಿದ್ದೀರಿ. ದಯಮಾಡಿ ಕೂಡಲೇ ಇದನ್ನು ಮಾಡಿಸ ಬೇಕು. ತಾವು ಹೈಕೋರ್ಟ್ ಆರ್ಡರ್ ನೋಡಿ ನೀವು ಲೋಕಾಯುಕ್ತಕ್ಕೆ ಮನವಿ ಮಾಡಬೇಕಾಗುತ್ತದೆ. ನೀವು ಏಕೆ ಮನವಿ

ಮಾಡಲಿಲ್ಲ? ಲೋಕಾಯುಕ್ತಕ್ಕೆ ಅವರು ಅರ್ಜಿ ಕೊಟ್ಟಿರುವುದು ಏನು? Excess measurementಎಂದು ಕೊಟ್ಟಿದ್ದಾರೆ. ಅವರು 4 lane ಮಾಡಬೇಡಿ ಎಂದು ಏನಾದರು ಕೊಟ್ಟಿದ್ದಾರಾ? ಆ ರೀತಿ 12(1) ಕೊಟ್ಟಿದ್ದರೆ, ನೀವು ಹೇಳುವ ವಿಚಾರವನ್ನು ನಾನು ಒಪ್ಪಿಕೊಂಡು ಬಿಡುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರೇವಣ್ಣನವರು ಹೇಳುವಂತಹ ವಿಚಾರಕ್ಕೆ ನಾನು diputeಮಾಡುತ್ತಿಲ್ಲ. Procedings vitiateಆಗಬಾರದು,ಮತ್ತೆ ಕೋರ್ಟಿನಿಂದ ತಡೆಯಾಜ್ಞೆ ತರಬಾರದು ಎನ್ನುವ ಉದ್ದೇಶದಿಂದ ಕಾನೂನಿನ ಇತಿಮಿತಿಗಳಲ್ಲಿ 4(1) ನೋಟಿಫಿಕೇಷನ್ ಆಗಿwithin one year ನಲ್ಲಿ ಆಗಲಿಲ್ಲವೆನ್ನುವ ಕಾರಣದಿಂದ.ಒಂದು ವೇಳೆ ನಾವು ಏನಾದರೂ ಮುಂದುವರೆಸಿದರೆ ಅದೇ ಒಂದು ಪಾಯಿಂಟ್‌ಗೋಸ್ಕರ ಕೋರ್ಟ್‌ನಿಂದ ತಡೆಯಾಜ್ಞೆ ತಂದರೆ ಕೆಲಸ ಆಗುವುದು ವಿಳಂಬವಾಗಬಹುದು ಎನ್ನುವ ಅನುಮಾನ ನನ್ನನ್ನು ಕಾಡುತ್ತಿದೆ. ನಾನು ಕಾನೂನು ಪಂಡಿತ ಅಲ್ಲ. ನಾನು ನಿಮ್ಮಷ್ಟೇ ಓದಿದವರು. ನಾನು ನೀವು ಇಬ್ಬರೂ ಒಂದೇ ಹಂತದಲ್ಲಿ ಓದಿದವರು. ನಾವಿಬ್ಬರೂ ಜಗಳ ಆಡುವುದಕ್ಕೆ ಹೋಗುವುದು ಬೇಡ. ಇದರ ಬಗ್ಗೆ ಕಾನೂನು ಪರಿಣಿತರನ್ನು ಕೇಳಿ ಮಾಡಬೇಕಾಗಿರುವ ಕೆಲಸ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಸ್ವೀಕರ್‌ರವರು, ಮಂಜಣ್ಣನವರು ಸರಿಯಾಗಿ ಹೋಗಲಿ ಎಂದು ರಸ್ತೆ ಮಾಡಿಸಿರುವುದು.

ಉಪಾಧ್ಯಕ್ಷರು: ನಮಗೆ ಇವತ್ತು ನೀವಿಬ್ಬರು ಒಂದೇ ಎನ್ನುವ ಹೊಸ ಸತ್ಯ ಗೊತ್ತಾಯಿತು.

ಶ್ರೀ ಹೆಚ್. ಖಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಮಂಜಣ್ಣನವರು ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಎ.ಮಂಜು: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಯವರೆ, ತಾವು ಉತ್ತರ ಏನು ಕೊಟ್ಟಿರಿ, ಅದಕ್ಕೆ ಸಂಬಂಧಪಟ್ಟ ವಿಷಯಕ್ಕೆ ಹೇಳುವುದಾದರೆ ಈ ರಸ್ತೆ ನಮ್ಮ ಭಾಗದಲ್ಲಿ ಹೋಗುತ್ತದೆ. ನೀವು ಹೇಳುವಾಗ ನಮ್ಮ ಅರಕಲಗೂಡು ಎನ್ನುವ ಹೆಸರನ್ನು ಬಿಟ್ಟಿರಿ. ಇದು ಅರಕಲಗೂಡು ಮೂಲಕ ಹೋಗುತ್ತದೆ. ಇದು ಭಾರಿ ಅವಶ್ಯಕತೆ ಇರುವಂತಹ ರಸ್ತೆ. ಈ ರಸ್ತೆ ಆಗಲೇಬೇಕು. ಇದರಲ್ಲಿ ರಾಜಕಾರಣ ಮಾಡಬೇಡಿ. ಏಕೆಂದರೆ ಅವರು ರಾಜಕಾರಣ ಮಾಡಿ ಸುಮಾರು ಬಾರಿ ಅದು ನಿಂತಿತ್ತು. ಅದನ್ನು ನೀವು ಮಾಡಬೇಡಿ. ನೀವು ದೊಡ್ಡತನ ತೋರಿಸಿಕೊಳ್ಳಿ. ಕಳೆದ ಬಾರಿ ಇದೇ ರೀತಿ reachನನ್ನಕ್ಷೇತ್ರದಲ್ಲಿ ಕಳ್ಳಿಮುದ್ದಳ್ಳಿ.

ಬೈಸ್ಸನಹಳ್ಳಿ ಮತ್ತು ದೇವನಹಳ್ಳಿ ಹತ್ತಿರ ನಾಲ್ಕು ಕಡೆ ರಸ್ತೆಗಳನ್ನು straightರಸ್ತೆಗಳನ್ನು ಮಡಿದ್ದಾರೆ. ಅದನ್ನು ಮಾಡಿದ ಮೂರು ವರ್ಷ ಅವಧಿಯಲ್ಲಿ ಅವರೇ maintenanceಮಾಡಬೇಕೆಂದು ಇದೆ. ಅದು ಕಳಪೆ ಕಾಮಗಾರಿಯಾಗಿದೆ. ಅವರು ಯಾರೇ ಕಂಟ್ರಾಕ್ಟರ್ ಆಗಿರಲಿ, ಆ ಕಾಮಗಾರಿ ಬಗ್ಗೆ ತನಿಖೆ ಮಾಡಬೇಕು. ಮತ್ತೆ ಅಲ್ಲಿನ ಕೆಲಸಗಳನ್ನು ನಿಮ್ಮ ಇಂಜಿನಿಯರಿಗಾಗಲಿ ಅಥವಾ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ತಿಳಿಸಿ, ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ.

ಉಪಾಧ್ಯಕ್ಷರು: ಇದರ ಬಗ್ಗೆ ಉತ್ತರಿಸಿದ್ದಾರೆ. ಮಾನ್ಯ ಸಚಿವರು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ನಿಯಮ 73ರ ಅಡಿಯಲ್ಲಿ ಮಾನ್ಯ ಎನ್. ಸಂಪಂಗಿಯವರು ಕೇಳಿರುವ ಪ್ರಶ್ನೆಗೆ ಉತ್ತರ ಕೊಡಲಿಲ್ಲವೆನ್ನುವ ವಿಚಾರ ಇತ್ತು. ನಾನುಈ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಈ ಉತ್ತರವನ್ನು ಇವತ್ತು ಬೆಳಗ್ಗೆ ತಮ್ಮ ಕಛೇರಿಗೆ ನಾವು ತಲುಪಿಸಿದ್ದೇವೆ.ತಮ್ಮ ಕಛೇರಿಯಲ್ಲಿ ದಾಖಲಾಗಿರುವಂತಹ ಮಾಹಿತಿ ನಮ್ಮ ಇಲಾಖೆಯಲ್ಲಿ ನನ್ನ ಹತ್ತಿರ ಇದೆ. ಹಾಗಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಾವ ಸದಸ್ಯರು ಅನ್ಯಥಾ ನಮ್ಮ ಇಲಾಖೆ ಅಥವಾ ಸರ್ಕಾರದ ಬಗ್ಗೆ ಭಾವಿಸದೆಸ್ಪೀಕರ್ ಕಛೇರಿಯಲ್ಲಿ ಯಾವುದೋ ಕಾರಣಗಳಿಗಾಗಿ ಮಿಸ್ಸ್ ಆಗಿದೆ ಅಥವಾ ಗಮನಕ್ಕೆ ಬಂದಿರಲಿಕ್ಕಿಲ್ಲ.

ಉಪಾಧ್ಯಕ್ಷರು: ಮಾನ್ಯ ಸಚಿವರೆ, ಇನ್ನೊಂದು ಮಾಹಿತಿ ಸಿಕ್ಕಿತ್ತು. ಶೂನ್ಯ ವೇಳೆಯಲ್ಲಿ ಇದೇ ಪ್ರಶ್ನೆ ಬಂದಿರುವುದರಿಂದ, ಶೂನ್ಯ ವೇಳೆಯಲ್ಲಿ ಬರಬಹುದು ಎನ್ನುವ ಹಿನ್ನೆಲೆಯಲ್ಲಿ ಸೌಲ್ಪ communication gap ಆಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಶೂನ್ಯ ವೇಳೆಯ ಪ್ರಶ್ನೆಗೆ ಉತ್ತರ ಯಾವತ್ತೂ ಸಿದ್ಧವಾಗಿರುವುದು ಅಪರೂಪ. ಏಕೆಂದರೆ ಅವರು ಕೇಳುವುದು ಗೊತ್ತಿರುವುದಿಲ್ಲ.

ಉಪಾಧ್ಯಕ್ಷರು: ಆ ಮಾಹಿತಿ ಕಛೇರಿಯಿಂದ ಬಂತು. ಇನ್ನು ಮುಂದೆ ಖಂಡಿತ ಈ ರೀತಿಯ lapsesಆಗಬಾರದು, ತಮ್ಮ ಕಡೆಯಿಂದ ಎಂದು ಹೇಳುತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಮ್ಮ ಇಲಾಖೆಯಲ್ಲಿ lapses ಆಗಿಲ್ಲ.

ಉಪಾಧ್ಯಕ್ಷರು: ಇಲ್ಲಿ ಶಾಸಕಾಂಗದ ಕಛೇರಿಯಲ್ಲಿ ಕೂಡ lapses ಆಗದ ರೀತಿಯಲ್ಲಿ ಸೂಚನೆ ಕೊಡುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಸಿದ್ಧರಾಮಯ್ಯನವರು ಹಿರಿಯ ಸದಸ್ಯರು, ಅವರು ಸಾಮಾನ್ಯವಾಗಿ ಸದನ ಮುಕ್ತಾಯವಾಗುವವರೆಗೂ ಇರುತ್ತಾರೆ. ನಾವು ಕೊಟ್ಟಿಲ್ಲ, ಸರ್ಕಾರದ್ದು,ಇಲಾಖೆಯದು, ನನ್ನದು ಪೈಫಲ್ಯ ಎನ್ನುವ ರೀತಿಯಲ್ಲಿ ಅಭಿಪ್ರಾಯ ಬರುವುದು ಬೇಡ. ನಾವು ಕೊಟ್ಟಿಲ್ಲವೆಂದರೆ ಕೊಟ್ಟಿಲ್ಲವೆಂದು ಹೇಳುತ್ತೇವೆ. ಕೊಟ್ಟಿದ್ದರೆ ಕೊಟ್ಟಿದ್ದೇವೆಂದು ಹೇಳುತ್ತೇವೆ.ಆದರೆ ತಮ್ಮ ಕಛೇರಿಯಲ್ಲಿ ಅದು ಯಾವುದೇಕಾರಣದಿಂದ ಶೂನ್ಯ ವೇಳೆ ವಿಷಯವೆಂದೋ, ನಿಯಮ 73ರ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದೋ, ಯಾವದೋ confusionನಿಂದ ಏನಾದರೂ ಆಗಿರಬಹುದು, ಆದರೆ ಸರ್ಕಾರ ಅದರ ಉತ್ತರವನ್ನು ತಲುಪಿಸಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು: ಆಯಿತು, ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8.00 ಗಂಟೆಗೆ ಮುಕ್ತಾಯಗೊಂಡು ಮತ್ತೆ ಮಂಗಳವಾರ ದಿನಾಂಕ 24.07.2012ರಂದು ಬೆಳಿಗ್ಗೆ 11.00 ಸೇರಲು ನಿಶ್ಚಯಿಸಿತು)

ಶ್ರೀರಂಗ ಏತ ನೀರಾವರಿ

ಅನುಭಂದ–1

61 (504)

ಶ್ರೀ ರಾಮಸ್ವಾಮಿ ಗೌಡ.ಬಿ.ಬಿ (ಕುಣಿಗಲ್)

ಪ್ರಶ್ನೆಗಳು

ಅ) ರಾಜ್ಯದಲ್ಲಿ ಹೇಮಾವತಿ ಜಲಾಶಯ ನಿರ್ಮಾಣ ಮಾಡುವ ಹಂತ ಅಥವಾ ತುಮಕೂರಿಗೆ ಹೇಮಾವತಿ ನೀರನ್ನು ಹರಿಸಬೇಕೆಂದು ಶಾಖಾ ನಾಲೆಗಳ ನೀಲಿನಕ್ಷೆಗಳನ್ನು ಸಿದ್ಧಪಡಿಸುವ ಹಂತಗಳಲ್ಲಿ ತುಮಕೂರು ಶಾಖಾ ನಾಲೆಯ 199 ನೇ ಕಿ.ಮೀ.ನಲ್ಲಿ ಶ್ರೀರಂಗ ಏತ ನೀರಾವರಿ ಯೋಜನೆ ಕೈಗೊಳ್ಳಬೇಕೆಂದು ಸರ್ಕಾರ ಯೋಜನೆ ಸಿದ್ದಪಡಿಸಿದ್ದು ನಿಜವೇ;

ಆ) ಹಾಗಿದ್ದಲ್ಲಿ ಈವರೆಗೆ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸದಿರುವುದಕ್ಕೆ ಕಾರಣಗಳೇನು;